ಮೂಲ ದಾವಾ ಸಂಖ್ಯೆ. 131/2017 ಡಿ ಡಬ್ಲ್ಯೂ 1

(ದಿನಾಂಕ 28-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)
ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಬಿ ಆರ್ ವಕೀಲರಿಂದಃ-

ಈ ಹಿಂದೆ ನ್ಯಾಯಾಲಯದಲ್ಲಿ ಈ ದಾವೆಯಲ್ಲಿ ನಾನು ಹೇಳಿರುವಂತಹ ಸಾಕ್ಷಿ ನನಗೆ ನೆನಪಿದೆ. ಪ್ರಸ್ತುತ ದಾವೆಯಲ್ಲಿನ ದಾವಾಸ್ತಿಯನ್ನು ನಾನು ಖರೀದಿಸಿದ್ದೇನಂತಾ ಹೇಳಿದ್ದು ಅದಕ್ಕಾಗಿ ನಿಮ್ಮ ಬಳಿ ಹಣ ಎಲ್ಲಿಂದ ಬಂತು ಎಂದರೆ ಸಾಕ್ಷಿಯು ನಾನು ದುಡಿದು ಸಾಲ ಮಾಡಿ ಖರೀದಿಸಿದ್ದೇನೆ ಎನ್ನುತ್ತಾರೆ. ನಾನು ದುಡಿಮೆ ಮಾಡಿದ ಬಗ್ಗೆ ಸಾಲ ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಾವು ಕೂಡು ಕುಟುಂಬದಲ್ಲಿದ್ದಾಗ ನನ್ನ ತಂದೆಯವರು ಆಸ್ತಿಯನ್ನು ನನ್ನ ಹೆಸರಿಗೆ ಖರೀದಿಸಿರುವುದರಿಂದ ನನಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾಧ್ಯವಾಗಿಲ್ಲವೆಂದರೆ ಸರಿಯಲ್ಲ.

ನನ್ನ ಸಹೋದರ ಸಹೋದರಿಯರು ವಿವಾಹವಾದ ಬಗ್ಗೆ ನನಗೆ ಮಾಹಿತಿ ಇದೆ. ಅವರ ಮದುವೆಯನ್ನು ನಾನೇ ಮಾಡಿದ್ದೇನೆಂದರೆ ಸಾಕ್ಷಿಯು ಅವರು ಮಾಡಿಕೊಂಡಿದ್ದಾರೆ ನಾನು ಮಾಡಿದ್ದೇನೆನ್ನುತ್ತಾರೆ. ನನ್ನ ಸಹೋದರ ಸಹೋದರಿಯರ ವಿವಾಹದ ಸಮಯದಲ್ಲಿ ನನ್ನ ತಂದೆ ತಾಯಿಯರು ಜೀವಂತ ಇದ್ದರು. ನಾನು, ನನ್ನ ತಂದೆ ತಾಯಿ ಎಲ್ಲರೂ ಸೇರಿ ನನ್ನ ಸಹೋದರ ಸಹೋದರಿಯರ ವಿವಾಹ ಮಾಡಿರುತ್ತೇವೆಂದರೆ ಸರಿ. ಕೊಪ್ಪಳ ತಾಃ ನ ಹಿರೇಬಗಿನಾಳ ಗ್ರಾಮದಲ್ಲಿರುವ ಜಮೀನನ್ನು ನನ್ನ ಸಹೋದರ ಸಹೋದರಿಯರ ಮದುವೆಯಾದ ನಂತರ ಖರೀದಿಸಿರುತ್ತೇನೆ. ವಾದಿಯ ಹೆಂಡತಿಯ ಊರು ಕೊಪ್ಪಳ ತಾಃನ ಹಿರೇಬಗಿನಾಳ ಗ್ರಾಮ ಎಂದರೆ ಸರಿ.

ಸೈಟ್ ಆಸ್ತಿಗಳು ವಾದಿಯ ಹೆಂಡತಿಯ ಹೆಸರಿಗೆ ಸರ್ಕಾರದಿಂದ ಮಂಜೂರಾದ ಆಸ್ತಿಗಳಾಗಿರುತ್ತವೆಂದರೆ ಸಾಕ್ಷಿಯು ಸರ್ಕಾರದವರು ನಮ್ಮ ಒಪ್ಪಿಗೆ ಮೇರೆಗೆ ಅವಳ ಹೆಸರಿಗೆ ಮಂಜೂರು ಮಾಡಿರುತ್ತಾರೆನ್ನುತ್ತಾರೆ. ಆ ರೀತಿ ನಾನು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ವಾದಿಗೆ ದಾವಾಸ್ತಿಯಲ್ಲಿ ಸಮಪಾಲು ಕೊಡಬೇಕಾಗುತ್ತದೆನ್ನುವ ಉದ್ದೇಶದಿಂದ ಒಂದು ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ನನಗೆ, ನನ್ನ ಸಹೋದರ ಸಹೋದರಿಯರಿಗೆ ಸಮಪಾಲು ಇದೆ ಅದನ್ನು ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ